ಮಕ್ಕಳು, ವಾರಾನ್ನದವರು, ಪೇಟೆಯ ಕೆಲಸಕ್ಕೆ ಹಾಜರಿ ಹಾಕುತ್ತಿದ್ದವರು... ಹೀಗೆ ಮನೆ ಸದಾ ಗಿಜಿಗುಡುತ್ತಿತ್ತು. ತೀರ್ಥಹಳ್ಳಿಯ ಪ್ರಸಿದ್ಧ ಎಳ್ಳಮಾವಾಸ್ಯೆ ಜಾತ್ರೆ ಬಂತು ಅಂದ್ರೆ ಮನೇಲಿ ನೆಂಟರಿಷ್ಟರ ದಂಡು. ಎಳ್ಳಮಾವಾಸ್ಯೆಯಿಂದ ಸಂಕ್ರಾಂತಿಯವರೆಗೆ ಕನಿಷ್ಠ ಹದಿನೈದು ದಿನಗಳವರೆಗೆ ಮನೆ ಅಕ್ಷರಶಃ ಸಂತೆ. ಹೀಗೆ ಒಂದೊಂದೇ ಪರಿವಾರ ಬಂದ ಹಾಗೆಲ್ಲಾ ನನಗೆ ಸಂಭ್ರಮದ ಉಬ್ಬು. ಪ್ರತಿ ಗುಂಪಿನ ಜೊತೆ ಸಿನಿಮಾಕ್ಕೆ ನಾಟಕಕ್ಕೆ ಮತ್ತೆ ಮತ್ತೆ ಹೋಗಬಹುದಾದಂತಹ ಸದವಕಾಶ. ನಾಟಕ ಆರಂಭವಾಗೋಕೆ ಮುನ್ನ ಲೋಭಾನದ ಹೊಗೆ ಹಾಯಿಸುತ್ತಿದ್ದಂತೆ ಮನಸ್ಸು ಅದೆಷ್ಟು ಉತ್ತೇಜಿತವಾಗಿ ಬಿಡ್ತಿತ್ತು ಅಂದರೆ ನೋಡಿದ್ದನ್ನೆ ಹತ್ತು ಸಲ ನೋಡಿದರೂ ಬೇಜಾರು ಅನ್ನುವುದಿರಲಿಲ್ಲ. ಜಾತ್ರೆಗೆಂದು ಹೊಲಿಸಿಕೊಂಡಿರುತ್ತಿದ್ದ ಫಳಫಳ ಹೊಳೆಯುವ ಲಂಗ, ಮಳೆಗಾಲದಲ್ಲಿ ಸೊಕ್ಕೇರಿ ಹರಿಯುತ್ತಿದ್ದ ತುಂಗೆಯನ್ನು ನೋಡಲು ಹೋಗುವ ಉಬ್ಬು, ವಿಶೇಷ ಸಂದರ್ಭದಲ್ಲಿ ನಾವು ಅತ್ತೆ ಎಂದು ಕರೆಯುತ್ತಿದ್ದ ಚಿಕ್ಕಜ್ಜಿಯ ರೇಷ್ಮೆ ಸೀರೆಗಳನ್ನು ಉಟ್ಟು ಮೆರೆದಾಡಿದ್ದು ಇವೆಲ್ಲಾ ಬಾಲ್ಯ ಕಾಲದ ಸವಿ ನೆನೆಪುಗಳು.

▸ ನಿಮ್ಮನ್ನು ಲೇಖಕಿಯಾಗಿ ರೂಪಿಸಿದ ಸಂಗತಿಗಳು ಯಾವುವು? ಬಾಲ್ಯ, ಮನೆಯ ಸಾಂಸ್ಕೃತಿಕ ಪರಿಸರ, ನಿರಂತರ ಸಾಹಿತ್ಯಿಕ ಓದು...

ಅಡಿಕೆ ಕೊಯಿಲಿನ ಕಾಲ ಅಂದರೆ ನಮಗೆ ನವರಾತ್ರಿ ರಜಾದ ಸಮಯ. ಆಳುಗಳ ಜೊತೆ ನಡುರಾತ್ರಿಯವರೆಗೆ ಕೂತು ಅಡಿಕೆ ಸುಲೀತಿದ್ವಿ. ಅಡಿಕೆ ಸುಲಿತಕ್ಕೆ ಬರುತ್ತಿದ್ದ ಆಳುಗಳು ಏಕತಾನತೆಯ ಬೇಸರ ಕಳೆಯೋಕೆ, ಕುಗುರಿ ಬೀಳೋದನ್ನ ತಪ್ಪಿಸೋಕೆ ಜನಪದ ಕತೆ, ಒಗಟುಗಳನ್ನ ಹೇಳ್ಕೊಳ್ತಾ ಇದ್ರು. ಕೇಳುವಾಗಿನ ಉತ್ಸಾಹ ಯಾವಾಗ್ಲೋ ಹೇಳೋ ಚಪಲಕ್ಕೆ, ನಂತರ ಬರೆಯೋ ಚಪಲಕ್ಕೆ ತಿರುಗಿರಬೇಕು, ಬಹುಶಃ ನಾನು ಮೊದಲಿಗೆ ಬರೆದಿದ್ದು ಕವಿತೆಗಳನ್ನ. ಹೈಸ್ಕೂಲಿನ ಎರಡನೇ ವರ್ಷದಲ್ಲಿದ್ದಾಗ ಕವನ ಬರೆಯೋಕೆ ಶುರು ಮಾಡಿದವಳು ನಾನು. ಮೊದಲಿಗೆ ಬರೆದಿದ್ದು ನನ್ನ ತಮ್ಮನ ಕುರಿತಾದ ಒಂದು ಕವನ; ನನ್ನ ಸಹಪಾಠಿಗಳಾಗಿದ್ದ ಮೂರ್ನಾಲ್ಕು ಜನ ಗೆಳತಿಯರು ನನ್ನ ಶ್ರೋತೃಗಳು. ಅವರ ವಾರೆವ್ಹಾಗಳಿಂದ ಪ್ರಚೋದನೆ ಪಡೆದು ಬಹಳಷ್ಟು ಕವಿತೆಗಳನ್ನು ಬರೆದೆ. ಆಗೆಲ್ಲ ಒಂದು ಮಾತು ಚಲಾವಣೆಯಲ್ಲಿತ್ತು. 'ಹದಿವಯಸ್ಸಲ್ಲಿ ಕವಿತೆ ಬರೀದಿದ್ರೆ ಅವರಲ್ಲಿ ಏನೋ ಐಬಿದೆ' ಅಂತ. ಹೀಗೆ ಕವನ ಬರೆಯೋದ್ರಲ್ಲಿ ಆರಂಭವಾದ ಸಾಹಿತ್ಯದ ಗೀಳು ಕತೆ ಬರೆಯೋದ್ರಲ್ಲಿ ಮಾರ್ಪಾಡಾಗಿದ್ದು ನನಗೇ ಗೊತ್ತಿಲ್ಲದ ಒಂದು ಬದಲಾವಣೆ. ಅಂತೂ ಹೈಸ್ಕೂಲು ಮುಗಿಯೋ ಹೊತ್ತಿಗೆ ಒಂದು ಎಕ್ಸರ್‌ಸೈಸ್ ತುಂಬಾ ಕತೆ ಬರೆದಿಟ್ಕೊಂಡಿದ್ದೆ. ನನ್ನ ಖಾಸಗಿ ಕ್ಷಣಗಳಲ್ಲಿನ ಬರಹಗಳನ್ನು ಸಾರ್ವಜನಿಕವಾಗಿಸುವಲ್ಲಿ ಇದ್ದ ಸಂಕೋಚ ಕ್ರಮೇಣ ಹೊರಟು ಹೋಯಿತು. ಪ್ರಕಟಣೆಯ, ಜನಪ್ರಿಯತೆಯ ರುಚಿ ಹಿಡಿಯಿತು. ನನ್ನ ಖಾಸಗಿ ಸ್ವತ್ತು, ನನ್ನ ಅಂತರಂಗದ ಗೌಪ್ಯತೆ, ನನ್ನೊಬ್ಬಳದೆ ಆದ ಭಾವನೆಗಳನ್ನು ನನ್ನ ಗೆಳತಿಯರಿಗೆ ನಾನು ಕೇಳಿಸ್ತಾ ಇದ್ದಿದ್ದು ಅವರ ಜೊತೆ ಹಲವಾರು ವರ್ಷಗಳ ಒಡನಾಟದ ಫಲಶ್ರುತಿ. ಹೀಗೆ ನಿರಂತರ ಓದು ಮತ್ತು ಪರಿಸರ ಎರಡೂ ನನ್ನ ನಿರ್ಮಿತಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದು ನಿಜ.

▸ ನಿಮಗೆ ತುಂಬಾ ಇಷ್ಟವಾದ, ನಿಮ್ಮ ಮೇಲೆ ಅಗಾಧ ಪ್ರಭಾವ ಬೀರಿದ ಲೇಖಕರು ಯಾರು? ಮತ್ತು ಯಾವ ಕಾರಣಕ್ಕಾಗಿ? ನಿಮ್ಮ ಮೇಲೆ ಅವರ ಪ್ರಭಾವವನ್ನು ಗುರುತಿಸಬಹುದೇ?